ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 311
ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 03.02.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದ ಅನೇಕ ಜಿಲ್ಲಾಧಿಕಾರಿಗಳ ಕಛೇರಿಯ ಅಸಂಖ್ಯಾತ ಕಂದಾಯ ಅಪೀಲು ಪ್ರಕರಣಗಳಿದ್ದರೂ ಜಿಲ್ಲಾಧಿಕಾರಿಗಳು ನಿಗಧಿತ ಸಮಯದಲ್ಲಿ ಮುತುವರ್ಜಿ ವಹಿಸಿ ಇತ್ಯರ್ಥ ಪಡಿಸದಿರುವದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಅದನ್ನು ನಿಭಾಯಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 21 ಎಲ್‌ಜಿಪಿ 2016, ದಿನಾಂಕ:20.08.2016ರಲ್ಲಿ ಪ್ರತಿ ವಾರ ಕನಿಷ್ಟ 2 – 3 ಬಾರಿ ನಿಯತಕಾಲಿಕವಾಗಿ ವಿಚಾರಣೆಗಳನ್ನು ನಿಗಧಿಪಡಿಸಿ ತ್ವರಿತಗತಿಯಲ್ಲಿ ಇತ್ಯರ್ಥ ಮಾಡಲು ಹಾಗೂ ತೀರ್ಪಿಗಾಗಿ ಕಾಯ್ದಿರಿಸಿದ ಪ್ರಕರಣಗಳಲ್ಲಿ ಯಾವುದೇ ವಿಳಂಬವಿಲ್ಲದೆ ಆದೇಶಗಳನ್ನು ಘೋಷಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 11 ಟಿಆರ್‌ಎಂ 2019, ದಿನಾಂಕ:211.01.2019ರಲ್ಲಿ ಜಾರಿಗೊಳಿಸಿರುವ ಕಂದಾಯ ನ್ಯಾಯಾಲಯ ಪ್ರಕರಣ ನಿರ್ವಹಣಾ ವ್ಯವಸ್ಥೆRevenue Court Case Monitoring System (RCCMS) ತಂತ್ರಾಂಶದ ಮೂಲಕ ಪ್ರಕರಣಗಳನ್ನು ತೀವ್ರಗತಿಯಲ್ಲಿ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದ್ದು, ಸಾರ್ವಜನಿಕರು ವಿಚಾರಣಾ ದಿನಾಂಕ, ಪ್ರಕರಣ ಹಂತದ ಮಾಹಿತಿ ಮತ್ತು ಆದೇಶದ ಪ್ರತಿಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.
ಆ	ಕಂದಾಯ ನ್ಯಾಯಾಲಯಗಳಲ್ಲಿನ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸಲು ವಿಶೇಷ ರೆವಿನ್ಯೂ ನ್ಯಾಯಾಲಯಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದರೆ, ಎಷ್ಟು ದಿನಗಳಳೊಗೆ ರಚಿಸಲಾಗುವುದು?	ಕಂದಾಯ ನ್ಯಾಯಾಲಯಗಳಲ್ಲಿನ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸಲು ವಿಶೇಷ ರೆವಿನ್ಯೂ ನ್ಯಾಯಾಲಯಗಳನ್ನು ಸ್ಥಾಪಿಸುವ ಉದ್ದೇಶವಿರುವುದಿಲ್ಲ.

ಸಂಖ್ಯೆ:ಆರ್‌ಡಿ/37/ಟಿಆರ್‌ಎಂ/2021

(ಆರ್. ಅಶೋಕ)
ಕಂದಾಯ ಸಚಿವರು
ಕರ್ನಾಟಕ ಸರ್ಕಾರ